ಕರ್ನಾಟಕ ಸರ್ಕಾರ

# ಭ್ರಷ್ಟಾಚಾರ ನಿಗ್ರಹ ದಳ

## ಪತ್ರಿಕಾ ಪ್ರಕಟಣೆ

ದಿನಾಂಕ 16/03/2019.

ಉಡುಪಿ ಜಿಲ್ಲೆ, ಕಾರ್ಕಳ ತಾಲ್ಲೂಕು, ವಿಘ್ನೇಶ ಎಂಬುವವರು ಬೆಂಗಳೂರಿನಲ್ಲಿ ನಡೆದ ಏರ್ ಶೋ ಸಮಯದಲ್ಲಿ ಘಟಿಸಿದ ಆಗ್ನಿ ಅನಾಹುತದಲ್ಲಿ ತನ್ನ ಕಾರು ಅಗ್ನಿಗಾಹುತಿಯಾಗಿರುತ್ತದೆ. ಸದರಿ ಕಾರಿಗೆ ಈಗಾಗಲೇ ಪಾವತಿಸಿರುವ ರಸ್ತೆ ತೆರಿಗೆ ಮೊತ್ತ ಸುಮಾರು ರೂ.65,000/– ಹಣವನ್ನು ವಾಪಸ್ಸು ಪಡೆಯಲು ಪ್ರಾದೇಶಿಕ ಸಾರಿಗೆ ಉಪ ಆಯುಕ್ತರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಶ್ರೀ.ಆರ್.ಎಂ.ವರ್ಣೇಕರ್, ಪ್ರಾದೇಶಿಕ ಸಾರಿಗೆ ಉಪ ಆಯುಕ್ತರು, ಉಡುಪಿ ಜಿಲ್ಲೆ ರವರು ಸದರಿ ವಿಚಾರದ ಬಗ್ಗೆ ಮುನಾಫ್ (ಮಧ್ಯವರ್ತಿ) ಎಂಬುವವರನ್ನು ಸಂಪರ್ಕಿಸುವಂತೆ ಹಾಗೂ ರೂ.6,500/– ಲಂಚದ ಹಣಕ್ಕೆ ಬೇಡಿಕೆ ಇಟ್ಟಿರುತ್ತಾರೆ.

ದಿನಾಂಕ:16/03/2019 ರಂದು ಶ್ರೀ.ಆರ್.ಎಂ.ವರ್ಣೇಕರ್ ಮತ್ತು ಶ್ರೀ.ಮುನಾಫ್ ರವರು ದೂರುದಾರರಿಂದ ರೂ.4,000/– ಲಂಚದ ಹಣವನ್ನು ಪಡೆಯುತ್ತಿದ್ದಾಗ ಉಡುಪಿ ಭ್ರಷ್ಟಾಚಾರ ನಿಗ್ರಹ ದಳದ ಅಧಿಕಾರಿಗಳಿಗೆ ಸಿಕ್ಕಿಬಿದ್ದಿರುತ್ತಾರೆ. ಇಬ್ಬರು ಆರೋಪಿತರನ್ನು ದಸ್ತಗಿರಿ ಮಾಡಿ, ಲಂಚದ ಹಣವನ್ನು ವಶಪಡಿಸಿಕೊಳ್ಳಲಾಗಿದೆ, ತನಿಖೆ ಮುಂದುವರೆದಿದೆ.